



ರಹಸ್ಯ ಅನುಭವಗಳು

‘ಒಂದು ದಿನ ನನಗೆ (ಪರಮಹಂಸರಿಗೆ) ಭೇದರಹಿತವಾದ ಅಖಂಡ ಚೈತನ್ಯದ ದರ್ಶನವಾಯಿತು. ಮೊದಲು ಭಗವಂತ ನನಗೆ ದರ್ಶನ ಮಾಡಿಸಿದ: ಅನೇಕ ಮಂದಿ ಮನುಷ್ಯರು, ಜೀವ, ಜಂತು, ಒಂದು ಕಡೆ ಇರುವುದನ್ನು. ಆ ಗುಂಪಿನಲ್ಲಿ ಸಾಹುಕಾರರು, ಇಂಗ್ಲಿಷ್‌ನವರು, ಮುಸಲ್ಮಾನರು, ನಾನು, ಜಾಡ ಮಾಲಿಗಳು, ನಾಯಿಗಳು, ಕೈಯಲ್ಲಿ ಒಂದು ಮಣ್ಣಿನ ತಟ್ಟೆಯ ತುಂಬ ಅನ್ನವನ್ನು ಹಿಡಿದಿದ್ದ ಒಬ್ಬ ಗಡ್ಡ ಬೆಳೆಸಿದ್ದ ಮುಸಲ್ಮಾನ ಎಲ್ಲರೂ ಇದ್ದೆವು. ಆ ಮುಸಲ್ಮಾನ ಎಲ್ಲರ ಬಾಯಿಗೂ ಕೆಲವು ಅನ್ನದ ಅಗುಳನ್ನು ಹಾಕಿದ. ನಾನೂ ಅದನ್ನು ತಿಂದೆ.

‘ಮತ್ತೊಂದು ದಿನ ಭಗವಂತ ನನಗೆ ತೋರಿಸಿದ: ಇಲ್ಲಿಗೆ ಅನೇಕ ಮಂದಿ ಭಕ್ತರು ಬರುವುದನ್ನು—ನನ್ನ ಪರಮ ಶಿಷ್ಯರನ್ನೂ, ನನ್ನ ಅಂತರಂಗ ಭಕ್ತರನ್ನೂ. ಬಳಿಕ ಸಾಯಂಕಾಲದ ಮಂಗಳಾರತಿಯ ಗಂಟೆ ಜಾಗಟೆ ಮೊದಲಾದವುಗಳ ಶಬ್ದ ಕೇಳಿ ಬಂದೊಡನೆಯೇ ಕುಟೀರದ ಮೇಲಕ್ಕೆ ಹತ್ತಿ ವ್ಯಾಕುಲ ಹೃದಯದಿಂದ ಕೂಗುತ್ತಿದ್ದೆ: ‘ಎಲ್ಲಿದ್ದೀರಿ ನೀವೆಲ್ಲ? ಬೇಗ ಬನ್ನಿ! ನಿಮ್ಮನ್ನು ನೋಡಬೇಕು ಎಂಬುದಾಗಿ ಜೀವ ಸುಮ್ಮನೆ ಚಡಪಡಿಸುತ್ತಿದೆ!’

“ಭಗವತಿ ಎಲ್ಲವನ್ನೂ ನನಗೆ ತೋರಿಸಿಕೊಟ್ಟುಬಿಟ್ಟಿದ್ದಾಳೆ. ಓ, ಆಕೆ ನನಗೆ ಎಷ್ಟೊಂದು ರಹಸ್ಯ ಅನುಭವಗಳನ್ನು ನೀಡಿದ್ದಾಳೆ! ಒಂದು ದಿನ ತೋರಿಸಿದಳು, ಎಲ್ಲೆಲ್ಲೂ ಶಿವಶಕ್ತಿಯರಿರುವುದನ್ನು. ಎಲ್ಲೆಲ್ಲೂ ಶಿವಶಕ್ತಿಯರ ಕ್ರೀಡೆಯೇ ನಡೆಯುತ್ತಿರುವುದನ್ನು ನೋಡಿದೆ. ಮನುಷ್ಯರಲ್ಲಿ, ಪ್ರಾಣಿಗಳಲ್ಲಿ, ತರುಗಳಲ್ಲಿ, ಲತೆಗಳಲ್ಲಿ ಎಲ್ಲದರಲ್ಲೂ ಶಿವಶಕ್ತಿಯಿರುವುದನ್ನು ನೋಡಿದೆ. ಪ್ರತಿಯೊಂದರಲ್ಲೂ ಪುರುಷ ಪ್ರಕೃತಿಯರ ಕ್ರೀಡೆಯನ್ನು ನೋಡಿದೆ.

“ಇನ್ನೊಂದು ದಿನ ತೋರಿಸಿದಳು, ನರಮುಂಡದ ರಾಶಿಯನ್ನು, ಪರ್ವತದ ಎತ್ತರದಷ್ಟು, ಇನ್ನು ಬೇರೆ ಏನೂ ಇರಲಿಲ್ಲ. ನಾನು ಅದರ ಮಧ್ಯದಲ್ಲಿ ಒಬ್ಬನೇ ಕುಳಿತಿದ್ದೆ!

‘ಇನ್ನೊಮ್ಮೆ ಆಕೆ ನನಗೆ ತೋರಿಸಿದಳು, ಮಹಾ ಸಮುದ್ರವನ್ನು. ನಾನು ಉಪ್ಪಿನ ಗೊಂಬೆಯಾಗಿ ಅದನ್ನು ಅಳೆಯಲು ಹೋಗುತ್ತಿದ್ದೆ. ಹಾಗೇ ಹೋಗಿ ಗುರುವಿನ ಕೃಪೆಯಿಂದ ಕಲ್ಲಾಗಿ ಪರಿವರ್ತನೆಯಾಗಿಬಿಟ್ಟೆ. ಆಗ ಕಣ್ಣಿಗೆ ಬಿತ್ತು ಒಂದು ಹಡಗು. ಒಡನೇ ಅದನ್ನು ಹತ್ತಿಬಿಟ್ಟೆ, ಗುರುವೇ ನಾವಿಕ.

‘ಸಮಾಧಿಗಳಲ್ಲಿ ಅನೇಕ ಬಗೆ. ಒಮ್ಮೆ ಹೃಷೀಕೇಶದ ಒಬ್ಬ ಸಾಧು ನನಗೆ ಹೇಳಿದ ಮಾತುಗಳಿಗೂ ನನ್ನ ಅನುಭವಗಳಿಗೂ ತಾಳೆಯಾಗಿಬಿಟ್ಟಿತು. ಕೆಲವು ವೇಳೆ ಕುಂಡಲಿನೀ ಶಕ್ತಿ ನನ್ನ ಶರೀರದೊಳಗೆ, ಇರುವೆಯ ಹಾಗೆ ಚಲಿಸುವುದು ನನ್ನ ಅನುಭವಕ್ಕೆ ಬಂದಿದೆ. ಇನ್ನು ಕೆಲವು ವೇಳೆ ಅದು ಕಪಿಯಂತೆ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ನೆಗೆಯೋ ಹಾಗೆ ‘ಚಂಗ್, ಚಂಗ್’ ಅಂತ ಚಲಿಸುವುದು ನನ್ನ ಅನುಭವಕ್ಕೆ ಬಂದಿದೆ. ಮತ್ತೆ ಕೆಲವು ವೇಳೆ ಅದು ಮೀನಿನ ಹಾಗೆ ಚಲಿಸುವುದನ್ನು ನೋಡಿದ್ದೇನೆ. ಅನುಭವ ಆಗಿರುವವರಿಗೆ ಮಾತ್ರವೇ ಇದು ಏನು ಎಂಬುದು ಗೊತ್ತಾಗಬೇಕಾದರೆ. ಸಮಾಧಿಯಲ್ಲಿ ಈ ಜಗತ್ತು ಮರೆತೇಹೋಗಿಬಿಡುತ್ತದೆ. ಮನಸ್ಸು ಅಲ್ಲಿಂದ ಸ್ವಲ್ಪ ಕೆಳಕ್ಕೆ ಇಳಿದ ನಂತರ ಹೇಳುತ್ತೇನೆ: ‘ತಾಯೆ, ಇದರಿಂದ ನನ್ನನ್ನು ಮುಕ್ತನನ್ನಾಗಿ ಮಾಡು. ನನಗೆ ನಿನ್ನೊಡನೆ ಮಾತನಾಡಬೇಕು ಅಂತ ಇಚ್ಛೆ.’

‘ನಾನು ನನ್ನ ಸಾಧನಾವಸ್ಥೆಯಲ್ಲಿ ಧ್ಯಾನ ಮಾಡುತ್ತ ಮಾಡುತ್ತ ಇನ್ನೂ ಏನೇನೋ ದರ್ಶನಗಳನ್ನು ಕಂಡೆ. ನಾನು ಒಮ್ಮೆ ಬಿಲ್ವವೃಕ್ಷದ ಕೆಳಗೆ ಧ್ಯಾನ ಮಾಡುತ್ತಿದ್ದಾಗ ಪಾಪಪುರುಷ ನನ್ನ ಎದುರಿಗೆ ಬಂದು ಹಲವಾರು ವಿಧಗಳಿಂದ ನನ್ನನ್ನು ಲೋಭಪಡಿಸಲು ಪ್ರಯತ್ನಿಸಿದ. ಆತ ಆಂಗ್ಲ ಸಿಪಾಯಿಯ ವೇಷ ಧರಿಸಿ ಬಂದಿದ್ದ. ಆತ ನನಗೆ ಹಣ, ಕೀರ್ತಿ, ಹೆಂಗಸಿನ ಸುಖ, ಅನೇಕ ವಿಧವಾದ ಶಕ್ತಿಗಳು ಮೊದಲಾದುವುಗಳನ್ನು ದೊರಕಿಸಿಕೊಡಲಿಚ್ಛಿಸಿದ. ಆಗ ಭಗವತಿಯನ್ನು ಪ್ರಾರ್ಥನೆ ಮಾಡಲಾರಂಭಿಸಿದೆ. ಇವೆಲ್ಲ ಬಹಳ ಗೋಪ್ಯವಾದ ವಿಷಯಗಳು. ಭಗವತಿ ಕಾಣಿಸಿಕೊಂಡಳು. ನಾನು ಆಕೆಗೆ ಹೇಳಿದೆ, ‘ತಾಯೆ, ಆತನನ್ನು ಕತ್ತರಿಸಿಹಾಕು!’ ಅಂತ. ಭಗವತಿಯ ಆ ರೂಪು—ಆ ಭುವನಮೋಹನ ರೂಪು ನನ್ನ ಕಣ್ಣಿಗೆ ಕಟ್ಟಿದ ಹಾಗೇ ಇದೆ. ಆಕೆ ಜಗನ್ಮಯಿಯ ರೂಪವನ್ನು ಧರಿಸಿ ನನ್ನ ಎದುರಿಗೆ ಬಂದಿದ್ದಳು. ಆಕೆಯ ದೃಷ್ಟಿ ಈ ಜಗತ್ತನ್ನೇ ನಡುಗಿಸುತ್ತಿರುವಂತೆ ತೋರುತ್ತಿತ್ತು.

‘ಭಗವಂತನ ರೂಪವನ್ನು ನೋಡಲು ಸಾಧ್ಯ. ಯಾವಾಗ ಉಪಾಧಿಗಳೆಲ್ಲ ನಾಶವಾಗಿಬಿಡುವುವೊ, ಯಾವಾಗ ವಿಚಾರ ಮಾಡುವುದು ನಿಂತುಹೋಗುವುದೊ, ಆಗ ಆತನ ದರ್ಶನ ದೊರೆಯುತ್ತದೆ. ಬಳಿಕ ಸಾಧಕನು ಮೂಕನಂತಾಗಿ ಸಮಾಧಿಸ್ಥನಾಗುತ್ತಾನೆ. ಜನ ಥಿಯೇಟರಿಗೆ ಹೋಗಿ ಆ ಮಾತು ಈ ಮಾತು ಹರಟುತ್ತ ಕುಳಿತಿರುತ್ತಾರೆ. ಅದರೆ ಪರದೆ ಮೇಲಕ್ಕೆ ಹೋಗುವುದೇ ತಡ, ಹರಟೆಯೆಲ್ಲ ಒಡನೆಯೇ ನಿಂತು ಹೋಗಿಬಿಡುತ್ತದೆ; ಸ್ಟೇಜಿನಲ್ಲಿ ಬರುವ ದೃಶ್ಯಗಳಲ್ಲಿಯೇ ಮಗ್ನರಾಗಿಬಿಡುತ್ತಾರೆ.”